ಸಾಕ್ಷಿ ಯನ್ನು ದಿಃ28.11.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನನಗೆ ಜಿ.ಎಸ್.ಟಿ ಮತ್ತು ಟಿನ್ ನಂಬರ್ ಇಲ್ಲ.
2. ಶುಂಠಿ ವ್ಯಾಪಾರಸ್ತರು ಎಂದರೆ ಕೋಟಿ ಲೆಕ್ಕದಲ್ಲಿ ವ್ಯಾಪಾರ ಇರುತ್ತದೆ ಎಂದರೆ ಸರಿ.
3. ಕೋಟಿಗಟ್ಟಲೆ ವ್ಯಾಪಾರ ಮಾಡುವವರು ಜಿ.ಎಸ್.ಟಿ ನಮೂದು ಮಾಡಿಸಿ ನಂಬರ್ ನೀಡುತ್ತಾರೆ ಎಂದರೆ, ನನಗೆ ಗೊತ್ತಿಲ್ಲ.
4. ಆರೋಪಿಯ ಜಿ.ಎಸ್.ಟಿ ಹಾಗೂ ಸಿ.ಎಸ್.ಟಿ ನಂಬರ್ ನನಗೆ ಗೊತ್ತಿಲ್ಲ.
5. ಆರೋಪಿ ಶುಂಠಿ ವ್ಯಾಪಾರಸ್ಥ ಅಲ್ಲ ಎಂದರೆ ಸರಿಯಲ್ಲ.
6. ಆರೋಪಿ ಯಾವಾಗ ಶುಂಠಿ ಖರೀದಿ ಮಾಡಿದರು ಎಂದರೆ ಡಿಸೆಂಬರ್ 2020 ರಲ್ಲಿ ಖರೀದಿಸಿದ್ದರು ದಿನ ನನಗೆ ಗೊತ್ತಿಲ್ಲ. ಸದರಿಯವರು ಖರೀದಿ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಎಷ್ಟು ಲಾರಿ ಬಂದಿದ್ದವು ಎಂದರೆ, 3-4 ದಿನ ತುಂಬಿದ್ದಾರೆ, ಲಾರಿ ಎಷ್ಟು ಎಂದು ನನಗೆ ಗೊತ್ತಿಲ್ಲ. ಲಾರಿಗಳ ನಂಬರ್ ನನಗೆ ಗೊತ್ತಿಲ್ಲ.
7. ಆಗ ಶುಂಠಿಯ ಬೆಲೆ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.
8. ಒಂದು ಲಾರಿಗೆ ಎಷ್ಟು ಮೂಟೆ ತುಂಬಿದರು ಎಂದರೆ, 500 ಮೂಟೆ ಮೇಲೆ ತುಂಬಿದ್ದಾರೆ. ಅವು 10 ಚಕ್ರದ 4 ಲಾರಿಗಳು ಇದ್ದವು.
9. ದೂರುದಾರರು ನಿಮ್ಮ ಸ್ನೇಹಿತರು ಎಂದರೆ ಸರಿಯಲ್ಲ. ನಿಮ್ಮ ಸಮುದಾಯದವರು ಎಂದರೆ ಸರಿ.
10. ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ನೊಟೀಸು ಬಂದಿಲ್ಲ ಎಂದರೆ ಸರಿ.
11. ನಿಮ್ಮನ್ನು ಸಾಕ್ಷಿ ಹೇಳಲು ದೂರುದಾರರು ಕರೆದುಕೊಂಡು ಬಂದಿದಾದರೆ ಎಂದರೆ ಸರಿ. ಅವರು ಹೇಳುದಂತೆ ಹೇಳುತ್ತಿದ್ದೀರಾ ಎಂದರೆ, ಇಲ್ಲ, ನನಗೆ ಗೊತ್ತಿರುವುದನ್ನು ಹೇಳುತ್ತಿದ್ದೇನೆ.
12. ನಾನು ಶುಂಠಿ ಬೆಳೆಯುತ್ತೇನೆ. ನನ್ನ ಸರ್ವೇ ನಂಬರ್ ಹಾಗೂ ವಿಸ್ತೀರ್ಣ ಹೇಳಿಲ್ಲ ಎಂದರೆ ಸರಿ.
13. ನಿಮಗೆ ಯಾವುದೇ ಆಸ್ತಿ ಇಲ್ಲ ಹಾಗೂ ನೀವು ಶುಂಠಿ ಬೆಳೆಗಾರರು ಅಲ್ಲದ ಕಾರಣ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.
14. ಶುಂಠಿ ಮಾರಾಟ ಮಾಡಿದ ರೈತರಿಗೆ ಲೆಕ್ಕ ಹಾಕಿ ಬಿಲ್ ನೀಡುತ್ತಾರೆ ಎಂದರೆ, ಕೆಲವರು ನೀಡುತ್ತಾರೆ ಕೆಲವರು ನೀಡುವುದಿಲ್ಲ ಎಂದು ನುಡಿಯುತ್ತಾರೆ.
15. ಲಕ್ಷ ಗಟ್ಟಲೆ ವ್ಯವಹಾರವನ್ನು ಬಾಯಿ ಮಾತಿನಲ್ಲಿ ಮಾಡುವುದಿಲ್ಲ ಎಂದರೆ ನಮ್ಮ ಹಳ್ಳಿ ಕಡೆ ಮಾಡುತ್ತಾರೆ ಎಂದು ನುಡಿಯುತ್ತಾರೆ.
16. ಆರೋಪಿಯನ್ನು ನೀವು ನೋಡೇ ಇಲ್ಲ ಎಂದರೆ ಸರಿಯಲ್ಲ.

17. ಈ ಪ್ರಕರಣದಲ್ಲಿ ಎಷ್ಟು ಮೂಟೆಗೆ ಎಷ್ಟು ಲಕ್ಷ ಎಂದು ಚೀಟಿಯನ್ನು ಆರೋಪಿ ದೂರುದಾರರಿಗೆ ನಮ್ಮ ಮುಂದೆ ಯಾವುದೇ ಚೀಟಿ ಕೊಟ್ಟಿಲ್ಲ. ಅವರು ಏನೇನು ವ್ಯವಹಾರ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಶುಂಠಿ ವ್ಯಾಪಾರ ಮಾಡಿದ್ದರು ಎಂದು ನುಡಿಯುತ್ತಾರೆ.
18. ಈ ತರದ ಸಾಲದ ವ್ಯವಹಾರಗಳು ಒಂದು ಪಕ್ಷ ನಡೆದಿದ್ದರೆ ಆಡಿಯೋ, ವಿಡಿಯೋ ಹಾಗೂ ಫೋಟೋ ತೆಗೆಯುತ್ತಾರೆ ಎಂದರೆ, ಅದನ್ನು ಅವರಿಗೆ ಕೇಳಬೇಕು ಎಂದು ನುಡಿಯುತ್ತಾರೆ. ಆದರೆ ಆ ರೀತಿ ವ್ಯವಹಾರ ನಡೆಯುತ್ತದೆ ಎಂದರೆ ಸರಿ.
19. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತಾ ಎಂದರೆ, 2000 ಮೂಟೆ ಶುಂಠಿ ಕೊಟ್ಟಿರುವುದು ಬರೆದಿರುತ್ತದೆ.
20. ಶುಂಠಿ ವ್ಯವಹಾರ ಬಟ್ಟೆರೆ ಬೇರೆ ಯಾವ ವ್ಯವಹಾರ ನನ್ನ ಮುಂದೆ ನಡೆದಿಲ್ಲ.
21. ಶುಂಠಿ ವ್ಯವಹಾರದ ಬಗ್ಗೆ ನಿಮಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.
22. ಆರೋಪಿ ಯಾವುದೇ ಶುಂಠಿ ಖರೀದಿ ಮಾಡಿಲ್ಲ ಹಾಗೂ ದೂರುದಾರರು ಶುಂಠಿ ಬೆಳೆದಿಲ್ಲ ಎಂದರೆ ಸರಿಯಲ್ಲ.
23. ನಿಮ್ಮ ಮುಂದೆ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
24. ನಿಮ್ಮ ಮುಂದೆ ಶುಂಠಿ ಮಾರಾಟ ಆಗಿಲ್ಲ ಹಾಗೂ ಆರೋಪಿ ಯಾವುದೇ ಚೆಕ್ಕು ನೀಡಿಲ್ಲ ಎಂದರೆ, ಡಿಸೆಂಬರ್ ನಲ್ಲಿ ಶುಂಠಿ ಮಾರಿದ ಒಂದು ತಿಂಗಳ ನಂತರ ಚೆಕ್ ನೀಡಿದ್ದಾರೆ ಎಂದು ನುಡಿಯುತ್ತಾರೆ. ಚೆಕ್ಕನ್ನು ನಮ್ಮ ಊರಿಗೆ ಬಂದು ನೀಡಿರುತ್ತಾರೆ. ಚೆಕ್ ನೀಡಿದ ದಿನಾಂಕ ನನಗೆ ಗೊತ್ತಿಲ್ಲ.
25. ಚೆಕ್ ನೀಡುವ ಸಮಯದಲ್ಲಿ ದೂರುದಾರರ ಅಣ್ಣ ತಮ್ಮಂದಿರು ಹಾಗೂ ಆರೋಪಿ ಕಡೆ 3-4 ಜನ ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಯಾವುದೇ ಚೆಕ್ ನೀಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ